

# ಇಬ್ಬರ ನಡುವಿನ ಮುದ್ದಿನ ಮಗು!

**ಒಂದೇ ಮಗುವಿದ್ದಾಗ, ಅದರ ಪಾಲನೆ ಪೋಷಣೆಯ ಬಗ್ಗೆ ಪಾಲಕರು ಹೆಚ್ಚಿನ ಜವಾಬ್ದಾರಿ ನಿರ್ವಹಿಸುವುದು ಅನಿವಾರ್ಯ.**

‘ಒಂದು ಮಗು ಮಗುವಲ್ಲ, ಒಂದು ಕಣ್ಣು ಕಣ್ಣಲ್ಲ’ ಎಂಬುದೊಂದು ಹಳೇ ಗಾದೆ. ಆರೋಗ್ಯ, ಶಿಕ್ಷಣದ ಸೌಕರ್ಯಗಳು ಸುಧಾರಣೆಗೊಂಡಿರುವ ಇಂದಿನ ಕಾಲಕ್ಕೆ ಇದು ಹೆಚ್ಚೇನೂ ಹೊಂದಾಣಿಕೆ ಆಗಲಿಕ್ಕಿಲ್ಲ. ಆದರೆ ಒಂದೇ ಮಗುವಿದ್ದಾಗ, ಅದರ ಲಾಲನೆ ಪಾಲನೆ ಮಾಡುವ ವಿಧಾನದಲ್ಲಿ ವ್ಯತ್ಯಾಸಗಳಿರುತ್ತವೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಒಂದೇ ಮಗುವಿನ ಅಮ್ಮನ ಮನಸ್ಥಿತಿಯೂ ಇಬ್ಬರು ಮಕ್ಕಳ ತಾಯಿಯ ಮನಸ್ಥಿತಿಯೂ ಬೇರೆಯೇ ಆಗಿರುತ್ತದೆ ಎನ್ನುವುದು ಹಿರಿಯ ಮಹಿಳೆಯರ ಅನುಭವದ ಮಾತು. ಎರಡೂ ಮನೆಗಳಲ್ಲಿ ನಡೆಯುವ ಸಂಭಾಷಣೆಗಳು ಬೇರೆಯೇ ತೆರನಾಗಿರುತ್ತವೆ.

ಮಕ್ಕಳೆಂದರೆ ಬೇಕಾದ ತರಲೆಗಳನ್ನು ಮಾಡಿಕೊಂಡು, ಅಪ್ಪ ಅಮ್ಮನೊಡನೆ ಹಟ ಮಾಡುತ್ತ, ಅವರ ಮಾತು ಕೇಳುತ್ತ, ಕೇಳದೇ ಇರುತ್ತ ಬೆಳೆಯುವ ಚಿಗುರುಕನಸುಗಳು. ಇಬ್ಬರು ಮಕ್ಕಳಿದ್ದಾಗ ಇಂತಹ ಮಕ್ಕಳಾಟಿಕೆಯ ಚಟುವಟಿಕೆಗಳಿಗೆ ಅವಕಾಶ ಹೆಚ್ಚು. ಒಂದೇ ಮಗುವಿದ್ದಾಗ ತರಲೆ ತಗಾದೆಗಳಿಗೆ ಅವಕಾಶ ಇರುವುದಿಲ್ಲ ಎನ್ನುವಂತಿಲ್ಲ. ಆದರೆ ಇಂದಿನ ಕಾಲದ ಸಣ್ಣ ಕುಟುಂಬಗಳಲ್ಲಿ ಅವರು ಮನೆಯೊಳಗೆ ತಮಗಿಂತ ವಯಸ್ಸಿನಲ್ಲಿ ಬಹಳ ಅಂತರವಿರುವ ಅಪ್ಪ ಅಮ್ಮನೊಡನೆ ಮಾತ್ರ ವ್ಯವಹರಿಸಬೇಕಾಗುತ್ತದೆ. ಪುಟಾಣಿಗಳ ಫ್ಯಾಂಟಸಿ ಲೋಕಗಳು, ಹುಸಿ ಕಳ್ಳತನದ ಸುಖಗಳು, ಕುತೂಹಲದ ಬೆಂಬತ್ತಿ ಹೋಗುವ ಖುಷಿಗಳು – ಇವೆಲ್ಲ ಎಳೆಯರ ಪಾಲಿಗೆ ಪರಿಪೂರ್ಣವಾಗಿ, ಸುಲಭವಾಗಿ ಒಲಿದು ಬರುವುದಿಲ್ಲ. ದೊಡ್ಡವರ ಒಡನಾಟದಲ್ಲಿ ಅವರು ತಮಗೆ ಅರಿವಿಲ್ಲದಂತೆಯೇ ದೊಡ್ಡವರದೇ ವಿಚಾರಗಳ ಭಾರವನ್ನು ಹೊರಲೇಬೇಕಾಗುತ್ತದೆ.

ಮೂರನೇ ತರಗತಿಯ ಸಾನ್ವಿ ಒಬ್ಬಳೇ ಮಗಳೆಂಬ ಮುದ್ದಿನಲ್ಲಿ ಬೆಳೆಯುತ್ತಿದ್ದಳು. ಮೊನ್ನೆ ತಾನೇ ಆಕೆಯ ಅಪ್ಪ ತನ್ನ ತಂಗಿಯೊಡನೆ, ಅಂದರೆ ತನ್ನ ಅತ್ತೆಯೊಡನೆ ಯದ್ವಾತದ್ವಾ ಜಗಳಾಡಿದ್ದನ್ನು ಅವಳು ಕಣ್ಣಾರೆ ನೋಡಿದ್ದಳು. ಇನ್ನು ಅಪ್ಪ ಮತ್ತು ಅತ್ತೆ ಟೂ ಬಿಡುತ್ತಾರೆ ಎಂದುಕೊಂಡು ಬಹಳ ಬೇಸರಿಸಿಕೊಂಡಿದ್ದಳು. ಅತ್ತೆಯ ಮನೆಗೆ ಹೋಗುವ, ಅಲ್ಲಿರುವ ಉಯ್ಯಾಲೆಯಲ್ಲಿ ಕುಳಿತುಕೊಳ್ಳುವ ಅವಕಾಶ ಕಳೆದುಹೋಯಿತೆಂದು ಬೇಸರಪಟ್ಟುಕೊಂಡಳು. ಆದರೆ ಹಾಗೇನೂ ಆಗದೇ ಇದ್ದುದು ಕಂಡು ಅವಳಿಗೆ ವಿಸ್ಮಯವೆನಿಸಿತು. ಒಂದೆರಡು ದಿನಗಳ ಬಳಿಕ ಅತ್ತೆ ಕ್ಯಾರೆಟ್ ಹಲ್ವ ಮಾಡಿ ತಗೊಂಡು ಬಂದಿದ್ದರು. ಇಬ್ಬರೂ ಸೋಫಾದಲ್ಲಿ ಆರಾಮವಾಗಿ ಕುಳಿತು ಮಾತನಾಡುತ್ತಿದ್ದರು. ಸೋದರ ಪ್ರೀತಿ ಎನ್ನುವುದನ್ನು ಗ್ರಹಿಸಲು ಸಾನ್ವಿಗೆ ಸ್ವಲ್ಪ ದೀರ್ಘ ಸಮಯವೇ ಬೇಕಾಯಿತು.

ಹೌದು, ಒಂಟಿ ಮಗುವಿಗೆ ಸೌಕರ್ಯಗಳ ಕೊರತೆಯಿರುವುದಿಲ್ಲ. ಆದರೆ ಸಂಬಂಧಗಳು, ಭಾವನಾಲೋಕದ ವಿಸ್ಮಯಗಳನ್ನು ಅರ್ಥ ಮಾಡಿಕೊಳ್ಳಲು ಹೆಚ್ಚಿನ ನೆರವು ಬೇಕಾಗುತ್ತದೆ.

ಒಂದೇ ಮಗುವಿನ ಪೋಷಣೆಯ ಬಗ್ಗೆ ತಜ್ಞರು ಅನೇಕ ಸಲಹೆ ಸೂಚನೆಗಳನ್ನು ಕೊಡುತ್ತಾರೆ. ದೊಡ್ಡವರೊಡನೆಯೇ ವ್ಯವಹರಿಸುವ ಒಂಟಿ ಮಗುವಿಗೆ ತಪ್ಪು ಮಾಡುವ ಮತ್ತು ರಿಯಾಯಿತಿ ಪಡೆಯುವ ಅವಕಾಶಗಳು ಕಡಿಮೆಯಿರುತ್ತದೆ. ಉದಾಹರಣೆಗೆ, ಒಂದು ಹೂಜಿಗೆ ನೀರು ತುಂಬಿಸಿ ಟೇಬಲ್ ಮೇಲಿಡಬೇಕಾಗಿದೆ. ಅವನೊಡನೆ ತಂಗಿಯೂ ಇದ್ದಾಳೆ ಎಂದಿಟ್ಟುಕೊಳ್ಳೋಣ. ಅವಳು ಮೊನ್ನೆ ತಾನೇ ಒಂದು ಚೆಂಬು ನೀರನ್ನು ಚೆಲ್ಲಿ, ಅಮ್ಮನಿಂದ ಬೈಸಿಕೊಂಡಿದ್ದಳು. ಅದರ ನೆನಪು ಅಳಿಸುವ ಮುನ್ನವೇ ಈಗ ಅಣ್ಣ ಟೇಬಲ್ ಮೇಲೆ ನೀರಿಡುತ್ತಿದ್ದಾನೆ. ಆಗ ಅವನ ಮನಸ್ಸಿನಲ್ಲಿ ತಂಗಿ ಮಾಡಿದ ತಪ್ಪು ಹಾಗೂ ಅದಕ್ಕೆ ದೊರೆತ ಅಮ್ಮನ ಪ್ರತಿಕ್ರಿಯೆಯನ್ನು ನೆನಪಿಸಿಕೊಳ್ಳುತ್ತದೆ. ಇಂಥ ಹೋಲಿಕೆ ಅಥವಾ ಸಾಧ್ಯತೆ ಒಂಟಿ ಮಗುವಿಗೆ ಸಿಗುವ ಅವಕಾಶವಿರುವುದಿಲ್ಲ. ದೊಡ್ಡವರ ಉದಾಹರಣೆಗಳಷ್ಟೇ ಅವರ ಕಣ್ಣಮುಂದಿರುತ್ತದೆ. ಪರ್ಫೆಕ್ಟ್ ಎಂಬಂತೆ ಕೆಲಸ ಮಾಡುವ ಅಮ್ಮನ ಉದಾಹರಣೆಯಷ್ಟೇ ಮನದಲ್ಲಿ ಸುಳಿದಾಡುತ್ತದೆ. ಹಾಗಾಗಿ ವಿನಾಯಿತಿಗಳಿಗೆ ಮಿತಿಯಿರುತ್ತದೆ.

ಒಂಟಿ ಮಗುವಿನ ಸಂದರ್ಭದಲ್ಲಿ ಮಗುವಿನ ಮೇಲೆ ಗಮನ ಹರಿಸಲು ಹೆತ್ತವರಿಗೆ ಸಾಕಷ್ಟು ಪುರುಸೊತ್ತು ಇರುವುದರಿಂದ, ದೊಡ್ಡವರ ನಿಗಾ ಎಂಬ ಮಸೂರದಡಿಯಲ್ಲಿಯೇ ಅವರು ಬಾಳಬೇಕಾಗುತ್ತದೆ. ವಯೋಸಹಜ ತರಲೆಗಳಿಗೆ ಕಡಿವಾಣ ಬೀಳುತ್ತದೆ.

ಹೆಚ್ಚು ನಿರೀಕ್ಷೆಗಳ ಭಾರವೂ ಕೆಲವೊಮ್ಮೆ ಅವರ ಮೇಲಿರಬಹುದು. ಅಪ್ಪ ಅಮ್ಮ ತಮ್ಮ ಜೀವನದ ಕನಸುಗಳನ್ನೆಲ್ಲ ಒಂದೇ ಮಗುವಿನ ಮೇಲೆ ಹೇರುವುದುಂಟು. ‘ನಮ್ಮೆಲ್ಲ ಆಸ್ತಿಗೆ ಏಕೈಕ ವಾರಸುದಾರ ನೀನಾದ್ದರಿಂದ, ನೀನೇ ನಮಗೆಲ್ಲಾ...’ ಎನ್ನುತ್ತಾ ಮಗುವನ್ನು ಮುದ್ದಿಸುವ ದೃಶ್ಯವೇನೋ ಸುಂದರವಾದುದೇ. ಆದರೆ ಇದೊಂದು ಪರೋಕ್ಷ ಷರತ್ತಿನಂತೆಯೂ ಕಾಣಿಸಬಹುದಲ್ಲವೇ.

ಒಂಟಿ ಮಗುವನ್ನು ಸಾಕುವ ರೀತಿ ನೀತಿಗಳ ಬಗ್ಗೆಯೇ ಕೌನ್ಸಿಲಿಂಗ್ ತರಗತಿಗಳಿವೆ. ಗೊಂದಲಗಳಾದಾಗ ಅಂತಹ ಸಮಾಲೋಚನೆಗಳ ಅವಕಾಶಗಳನ್ನು ಒಂದೇ ಮಗುವಿನ ಪೋಷಕರು ಬಳಸಿಕೊಳ್ಳಬಹುದು. ಅವರು ತಮ್ಮ ಮಗುವಿಗೆ ತನ್ನದೇ ವಯಸ್ಸಿನ ಮಕ್ಕಳ ಜೊತೆಗೆ ಹೆಚ್ಚು ಕಾಲ ಕಳೆಯಲು ಅವಕಾಶಗಳನ್ನು ಸೃಷ್ಟಿಸಿದರೆ ಚೆನ್ನ.

■ ಸ್ವಯಂಪ್ರಭಾ

ಪ್ರತಿಕ್ರಿಯಿಸಿ: **feedback@sudha.co.in**